# ನಿನಗಾಗಿ

■ **ನರಸಿಂಹಾರೆಡ್ಡಿ ಯಂಕಾಮೋಳ**
ಕಲೆ: ಸಂತೋಷ್ ಸಸಿಹಿತ್ಲು



ಎಲ್ಲೆಲ್ಲೂ ಬಯಲು
ನೆತ್ತಿ ಸುಡುವ ಬಿಸಿಲು
ನೀರಿಗಾಗಿ ಹಾರುತ
ಬಲುದೂರ ಹೋಗುವೆ
ನನಗಾಗಿ ಮನೆಮೇಲೆ
ನೀರನಿಡಿ ಬೇಸಿಗೆ ಬಂದಿದೆ

ಬಿಸಿಗಾಳಿಗೆ ದಾಹವು
ಮತ್ತಷ್ಟು ಹೆಚ್ಚುತಿದೆ
ಆಹಾರ ಹುಡುಕುತಾ
ಕಾಡುನಾಡು ಹಾರುವ
ನನಗಾಗಿ ಮನೆಮೇಲೆ
ಕಾಳನಿಡಿ ಬೇಸಿಗೆ ಬಂದಿದೆ

ನಿಮಗಿರುವ ಹಾಗೆ
ನನಗೂ ಮರಿಗಳಿವೆ
ಗೂಡಿಲ್ಲದೇ ಬಿಸಿಲಿಗೆ
ಹಾಹಾಕಾರ ಎದ್ದಿವೆ
ನನಗಾಗಿ ಮನೆಮೇಲೆ
ನೆರಳಿಡಿ ಬೇಸಿಗೆ ಬಂದಿದೆ

ಎಲ್ಲಿ ನೋಡಿದರಲ್ಲಿ
ಕಾಂಕ್ರೀಟು ಮನೆಗಳು
ಅನ್ನನೆರಳು ನೀಡುವ
ಗಿಡ ಕಾಣೆಯಾಯಿತು
ಮಳೆಗಾಲಕೆ ಸಸಿನೆಟ್ಟು
ಬೆಳಸಿಡಿ ಬೇಸಿಗೆ ಬರುತ್ತದೆ




---

## ಕುಂಚ ಪ್ರಪಂಚ



**ಶ್ರದ್ಧಾ ಕಾರ್ತಿಕ್**
7ನೇ ತರಗತಿ,
ಕ್ರಿಸಲಿಸ್ ಹೈ ಸ್ಕೂಲ್,
ಬೆಂಗಳೂರು







**ಚಿರಂತ್ ಪಿ.**
6ನೇ ತರಗತಿ, ಆಡನ್ ಸ್ಕೂಲ್,
ಬೆಂಗಳೂರು